# ಮಳೆಗಾಲದ ಡ್ರೆಸ್ ಟ್ರೆಂಡ್

ಮಳೆಗಾಲದಲ್ಲಿ ಎಲ್ಲ ಬಗೆಯ ಉಡುಪುಗಳನ್ನು ತೊಡಲು ಆಗುವುದಿಲ್ಲ. ಹಾಗಂತ ಆಯ್ಕೆಗಳೇನೂ ಕಡಿಮೆ ಇಲ್ಲ. ಫ್ಯಾಷನ್ ಜಗತ್ತು ದಿನ ದಿನಕ್ಕೆ ತನ್ನ ಬಾಹುಗಳನ್ನು ವಿಸ್ತಾರಗೊಳಿಸಿಕೊಳ್ಳುತ್ತಲೇ ಇರುತ್ತದೆ. ಹಾಗಾಗಿ ಆಯ್ಕೆಗಳು ಹಲವು.

### ಮಿನಿ ಸ್ಕರ್ಟ್

ಕೆಲ ವರ್ಷಗಳ ಹಿಂದೆ ಮಿಂಚಿ ಮರೆಯಾಗಿದ್ದ ಮಿನಿ ಸ್ಕರ್ಟ್‌ಗಳು ಈಗ ಮತ್ತೆ ಮುನ್ನೆಲೆಗೆ ಬಂದಿವೆ. ಕಚೇರಿ, ಪಾರ್ಟಿ, ಪ್ರವಾಸ ಇತರ ಯಾವುದೇ ಸಂದರ್ಭಗಳಿಗೆ ಈ ಉಡುಪು ಹೆಚ್ಚು ಹೊಂದುತ್ತದೆ. ಡೆನಿಮ್, ಪ್ಲೆಟೆಡ್, ಫ್ಲೇರ್ಡ್ ಹೀಗೆ ವಿವಿಧ ಶೈಲಿಯ ಮಿನಿ ಸ್ಕರ್ಟ್‌ಗಳು ಈಗ ಟ್ರೆಂಡ್.

### ಮಿನಿ ಡ್ರೆಸ್‌ಗಳು

ಮಳೆಗಾಲಕ್ಕೆ ಇವು ಹೆಚ್ಚು ಸೂಕ್ತ. ಕಚೇರಿ ದಿರಿಸಿಗೆ ಇವು ಅತ್ಯುತ್ತಮ ಆಯ್ಕೆ. ಮಿನಿ ಡ್ರೆಸ್‌ಗಳೊಂದಿಗೆ ಬೆಲ್ಟ್, ಫ್ಲಾಟ್ ಚಪ್ಪಲಿಗಳು ಸ್ಟೈಲಿಶ್ ಲುಕ್ ನೀಡುತ್ತವೆ. ಶಾರ್ಟ್ಸ್‌ನೊಂದಿಗೆ ಮಿನಿ ಫ್ರಾಕ್, ಸಡಿಲವಾದ ಟೀಶರ್ಟ್ ಧರಿಸಬಹುದು.

### ಶಾರ್ಟ್ ಶರ್ಟ್

ಶರ್ಟ್‌ಗಳೇನಿದ್ದರೂ ಪುರುಷರು ಧರಿಸುವ ಉಡುಪು ಎಂಬ ಹಣೆಪಟ್ಟಿ ಕಳಚಿ ಬಹುಕಾಲವಾಯಿತು. ಕಾಲೇಜು ಹುಡುಗಿಯರು, ಕಚೇರಿಗೆ ಹೋಗುವವರಿಗಾಗಿಯೇ ಹಲವು ಬಗೆಯ ಶರ್ಟ್‌ಗಳು ವಿವಿಧ ಶೈಲಿಯಲ್ಲಿ ಲಭ್ಯ ಇವೆ. ಗಿಡ್ಡನೆ ಶರ್ಟ್ ಮಳೆಗಾಲದ ಟ್ರೆಂಡ್. ಜೀನ್ಸ್, ಡೆನಿಮ್ ಅಥವಾ ಬಣ್ಣದ ಪ್ಯಾಂಟ್‌ಗಳೊಂದಿಗೆ ಮ್ಯಾಚ್ ಮಾಡಿಕೊಳ್ಳಬಹುದು.



ಸಮಯ. ಆದರೆ, ಕೆಲವರು ಇಷ್ಟದ ಬಟ್ಟೆ ತೊಡಲು ಆಗುವುದಿಲ್ಲ ಎಂದು ಬೇಸರ ಪಡುವರು. ನಮ್ಮ ಅಗತ್ಯಕ್ಕೆ ತಕ್ಕಂತೆ ಬಟ್ಟೆಯ ಆಯ್ಕೆಯನ್ನು ಕೊಂಚ ಬದಲಾಯಿಸಿಕೊಂಡರೆ ಆನಂದದಿಂದ ಮಳೆಯನ್ನು ಆಸ್ವಾದಿಸಬಹುದು' ಎನ್ನುತ್ತಾರೆ ಬೆಂಗಳೂರಿನಲ್ಲಿರುವ ಫ್ಯಾಷನ್ ಡಿಸೈನರ್ ಬೃಂದಾ ಎಸ್. ಗೌಡ.

'ಶಾರ್ಟ್ ಡ್ರೆಸ್, ಶಾರ್ಟ್ ಟಾಪ್‌ಗಳನ್ನು ತೊಟ್ಟು ಬೀಗಲು ಇದು ಸಕಾಲ. ಕಚೇರಿ, ಕಾಲೇಜು, ಶಾಲೆ ಯಾವುದೇ ಇರಲಿ ನಿತ್ಯದ ಉಡುಗೆಯನ್ನು ಒಂದಷ್ಟು ಬದಲಾಯಿಸಿಕೊಂಡು ನಿಮ್ಮದೇ ಟ್ರೆಂಡ್ ಸೃಷ್ಟಿಸಿಕೊಳ್ಳಬಹುದು' ಎನ್ನುವ ಬೃಂದಾ ಅವರು 'ಬಿಳಿ ಬಣ್ಣದ ಹಾಗೂ ಇತರೆ ತಿಳಿ ಬಣ್ಣದ ಉಡುಗೆಗಳನ್ನು ಈ ಸಮಯದಲ್ಲಿ ವಾರ್ಡ್‌ರೋಬ್‌ನ ಮೂಲೆಗೆ ಸರಿಸಿ. ಅವುಗಳನ್ನು ಧರಿಸುವುದು ಈ ಸಮಯದಲ್ಲಿ ಬೇಡವೇ ಬೇಡ' ಎನ್ನುವರು.

### ಗಾಢ ಬಣ್ಣಗಳನ್ನು ಆರಿಸಿ

ಗಾಢ ಬಣ್ಣದ ಬಟ್ಟೆ ಧರಿಸುವುದು ಉತ್ತಮ. ಏಕೆಂದರೆ ಬಟ್ಟೆಗೆ ಕೆಸರು ಸಿಡಿದರೂ, ಹೆಚ್ಚು ಕೊಳೆ ಕಾಣುವುದಿಲ್ಲ. ತಿಳಿ ಬಣ್ಣದ ಬಟ್ಟೆಗೆ ಸ್ವಲ್ಪ ಕೆಸರು ಸಿಡಿದರೂ ಕಲೆ ಹಾಗೆಯೇ ಉಳಿಯುತ್ತದೆ. ಇಷ್ಟದ ಬಟ್ಟೆ ಹಾಳಾದರೆ ಮನಸಿಗೆ ಬೇಸರ. ಹಾಗಾಗಿ ಆ ಗೋಜಿಗೆ ಹೋಗದೆ ಗಾಢ ಬಣ್ಣದ ಉಡುಗೆ ತೊಟ್ಟು ಮಳೆಯಲ್ಲಿ ಮಿಂದೂ ಬೀಗಬಹುದು. ಶಾರ್ಟ್ ಟಾಪ್–ಲೆಗ್ಗಿನ್ಸ್, ಖಾಕಿ ಬಣ್ಣದ ಟಾಪ್ ಈಗಿನ ಟ್ರೆಂಡ್. ಗಾಢ ಬಣ್ಣದ ಲೆಗ್ಗಿನ್‌ಗಳನ್ನು ಯಾವುದೇ ಕ್ಯಾಷುವಲ್ ಉಡುಗೆಗಳೊಂದಿಗೆ ಮ್ಯಾಚ್ ಮಾಡಿಕೊಳ್ಳಬಹುದು. ಕುರ್ತಾ, ಸಲ್ವಾರ್ ಕಮೀಜ್, ಚೂಡಿದಾರ್ ಧರಿಸುವಾಗಲೂ ಗಾಢ ಬಣ್ಣವನ್ನು ಆಯ್ದುಕೊಳ್ಳಿ.

ಗುಲಾಬಿ, ಹಸಿರು, ಕೆಂಪು, ಚಾಕೊಲೇಟ್ ಬಣ್ಣ ಈ ಕಾಲಕ್ಕೆ ಹೆಚ್ಚು ಆಪ್ತ. ತಿಳಿ ಬಣ್ಣದ ಟಾಪ್ ಧರಿಸುವಿರಾದರೆ ಗಾಢ ಬಣ್ಣದ ಬಾಟಮ್ ಆಯ್ದುಕೊಳ್ಳಿ.

### ದಪ್ಪನೆ ಬಟ್ಟೆ ಬೇಡ

ಡೆನಿಮ್ ಉಡುಗೆಗಳು ಮಳೆಗಾಲದಲ್ಲಿ ಬೇಗನೆ ಒಣಗುವುದಿಲ್ಲ. ಎರಡು– ಮೂರು ದಿನ ಒಣಗಲು ಹಾಗೆಯೇ ಬಿಟ್ಟರೆ ಬಟ್ಟೆಗಳು ಕೆಟ್ಟ ವಾಸನೆ ಬೀರುತ್ತವೆ. ಅಲ್ಲದೆ ಧರಿಸಿದಾಗ ಮಳೆಯಲ್ಲಿ ನೆನೆದರೆ ನೀರು ಹಿಡಿದು ಅತಿ ಭಾರ ಎನಿಸುತ್ತವೆ. ಹಾಗಾಗಿ ಈ ಬಟ್ಟೆಗಳನ್ನು ಬದಿಗಿರಿಸಿ. ಬೇಗ ಒಣಗುವ ಹತ್ತಿ ಬಟ್ಟೆ, ಶಿಫಾನ್, ಮಲ್ ಬಟ್ಟೆ, ನೈಲಾನ್ ಬಟ್ಟೆಗಳು ನಿಮ್ಮ ಸಂಗಾತಿಗಳಾಗಲಿ. ಇವುಗಳಿಗೆ ಕೆಸರು ಹತ್ತಿದರೂ ಕಲೆ ಉಳಿಯುವುದಿಲ್ಲ. ತೊಳೆದು ಹಾಕಿದರೆ ಬೇಗನೆ ಒಣಗುತ್ತವೆ.



> ಮಳೆಗೆ ಉದ್ದದ ಉಡುಪುಗಳು ಹಾಳಾಗುತ್ತವೆ ಎಂದು ಅವುಗಳನ್ನು ಧರಿಸದಿದ್ದರೂ, ಗ್ರ್ಯಾಂಡ್ ಲುಕ್ ನೀಡುವ ಶಾರ್ಟ್ ಕುರ್ತಾ ತೊಟ್ಟು ಬೀಗಬಹುದು.
>
> **-ಬೃಂದಾ ಎಸ್. ಗೌಡ,**
> ವಸ್ತ್ರ ವಿನ್ಯಾಸಕಿ

ಪ್ರತಿದಿನವೂ ಸೀರೆ ತೊಟ್ಟು ಕಚೇರಿಗೆ ಹೋಗುವಿರಾದರೆ ನೈಲಾನ್, ಸಿಂಥೆಟಿಕ್ ಸೀರೆ ಧರಿಸುವುದು ಉತ್ತಮ. ಕಾಟನ್ ಸೀರೆ ಮಳೆಯಲ್ಲಿ ನೆನೆದರೆ ಮೈಗೆ ಅಂಟಿಕೊಳ್ಳುತ್ತದೆ. ಅಲ್ಲದೆ ಕೆಸರು ಸಿಡಿದರೆ ಕೊಳೆ ಬಿಡಿಸುವುದು ತ್ರಾಸದಾಯಕ. ಸಿಂಥೆಟಿಕ್ ಸೀರೆಗೆ ಕಾಟನ್ ಪೆಟಿಕೋಟ್ ಧರಿಸಿ.

ಮಾನ್ಸೂನ್ ಗಾಳಿಯಲ್ಲಿ ಆರ್ದ್ರತೆ ಹೆಚ್ಚು. ಹಾಗಾಗಿ ಈ ಹವಾಮಾನದಲ್ಲಿ ಕಾಟನ್ ಉಡುಪುಗಳು ಉತ್ತಮ ಆಯ್ಕೆ. ಮಳೆ, ಚಳಿಯಿಂದ ರಕ್ಷಣೆಗೆ ಜಾಕೆಟ್, ಪುಲ್‌ಓವರ್, ಓವರ್‌ಕೋಟ್ ಬಳಸಬಹುದು. ಇನ್ನು ಮಳೆಗಾಲದಲ್ಲಿ ನಿಮ್ಮ ಯಾವುದೇ ಉಡುಗೆಯೊಂದಿಗೆ ಸ್ಟೋಲ್ ಜತೆಗಿರಲಿ. ರಸ್ತೆಯಲ್ಲಿ ನಡೆದು ಹೋಗುವಾಗ ಅಚಾನಕ್ ಆಗಿ ಮಳೆ ಬಂದರೆ, ಮಳೆಯಲ್ಲಿ ನೆನೆದರೆ ಒರೆಸಿಕೊಳ್ಳಲು, ತಲೆ ನೆನೆಯದ ಹಾಗೆ ರಕ್ಷಿಸಿಕೊಳ್ಳಲು ಸ್ಟೋಲ್ ಅಥವಾ ದುಪ್ಪಟ್ಟಾ ಸಹಾಯಕ್ಕೆ ಬರುತ್ತವೆ.

### ಚಪ್ಪಲಿಗಳು ಹೀಗಿರಲಿ

ಮಳೆಗಾಲದಲ್ಲಿ ಲೆದರ್ ಶೂ, ಹೈಹೀಲ್ಡ್ ಚಪ್ಪಲಿ ಧರಿಸುವುದು ಬೇಡವೇ ಬೇಡ. ನೀರಿನಲ್ಲಿ ಒದ್ದೆಯಾದರೆ ನಡೆಯಲು ಕಷ್ಟವಾಗುತ್ತದೆ. ಅಲ್ಲದೆ ರಸ್ತೆಯಲ್ಲಿ ನೀರು ತುಂಬಿಕೊಂಡು ತಗ್ಗು ಉಬ್ಬುಗಳು ಕಾಣದೆ ಬೀಳುವ ಸಂಭವವೇ ಹೆಚ್ಚು. ಹಾಗಾಗಿ ರಬ್ಬರ್ ಚಪ್ಪಲಿಗಳನ್ನು ಬಳಸುವುದು ಹೆಚ್ಚು ಸೂಕ್ತ. ಇವು ನಡೆಯುವಾಗ ಹಿಂದೆ ಬಟ್ಟೆಗೆ ಕೆಸರು ಸಿಡಿಯುವುದಿಲ್ಲ. ನಡೆಯಲೂ ಸಲಭವೆನಿಸುತ್ತವೆ. ಅಲ್ಲದೇ ಬೆಲೆಯೂ ಕಡಿಮೆ. ಮೊಣಕಾಲುದ್ದದ ಅಥವಾ ಸಾಮಾನ್ಯ ಬೂಟ್ ಧರಿಸಿ ನಿಮ್ಮದೇ ಟ್ರೆಂಡ್ ಸೃಷ್ಟಿಸಬಹುದು. ■